# ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು : ಶ್ರೀಮತಿ ಎಸ್. ವೀಣಾ ಅಚ್ಚಯ್ಯ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1310

ಉತ್ತರಿಸಬೇಕಾದ ದಿನಾಂಕ : 08-03-2022

ಉತ್ತರಿಸಬೇಕಾದ ಸಚಿವರು : ಸಹಕಾರ ಸಚಿವರು

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಅ | ಕೊಡಗು ಜಿಲ್ಲೆಯಲ್ಲಿ ಪ್ರಸಕ್ತ ಆರ್ಥಿಕ ವರ್ಷದಲ್ಲಿ ಈಗಾಗಲೇ ಸಹಕಾರ ಸಂಸ್ಥೆಗಳಿಂದ ಸಾಲ ಮತ್ತು ಸೌಲಭ್ಯಗಳನ್ನು ಒದಗಿಸಲಾಗಿದೆಯೇ; | ಹೌದು, ಒದಗಿಸಲಾಗಿದೆ. |
| ಆ | ಇದುವರೆಗೂ, ಜಿಲ್ಲೆಯ ಪ್ರತಿ ಸಹಕಾರ ಸಂಸ್ಥೆಯ ಮೂಲಕ ವಿತರಣೆಯಾಗಿರುವ ಸಾಲ ಮತ್ತು ಸೌಲಭ್ಯಗಳ ವಿವರಗಳೇನು; | ಕೊಡಗು ಜಿಲ್ಲೆಯಲ್ಲಿನ 73 ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು, ಕೊಡಗು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ಹಾಗೂ 03 ಪಿಕಾರ್ಡ್ ಬ್ಯಾಂಕುಗಳ ಮುಖಾಂತರ ರೈತರಿಗೆ ಈ ಕೆಳಕಂಡ ಸಾಲ ಸೌಲಭ್ಯಗಳನ್ನು ನೀಡಲಾಗುತ್ತಿದೆ.<br>1. ರೂ.3.00 ಲಕ್ಷಗಳವರೆಗೆ ಶೂನ್ಯ ಬಡ್ಡಿ ದರದಲ್ಲಿ ಅಲ್ಪಾವಧಿ ಬೆಳೆ ಸಾಲ ಹಾಗೂ ರೂ.2.00 ಲಕ್ಷಗಳವರೆಗೆ ಶೂನ್ಯ ಬಡ್ಡಿ ದರದಲ್ಲಿ ಪಶುಸಂಗೋಪನೆ ಮತ್ತು ಮೀನುಗಾರಿಕೆ ಚಟುವಟಿಕೆಗಳಿಗೆ ದುಡಿಯುವ ಬಂಡವಾಳವಾಗಿ ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಾಲ ಒದಗಿಸಲಾಗುತ್ತಿದೆ.<br>2. ರೂ.10.00 ಲಕ್ಷಗಳವರೆಗೆ ಶೇ.3 ರ ಬಡ್ಡಿ ದರದಲ್ಲಿ ಮಧ್ಯಮಾವಧಿ ಮತ್ತು ದೀರ್ಘಾವಧಿ ಕೃಷಿ/ಕೃಷಿ ಸಂಬಂಧಿತ ಸಾಲ, ತುಂತುರು ನೀರಾವರಿ ಸಾಲ, ಕೃಷಿ ಯಂತ್ರೋಪಕರಣ ಖರೀದಿ ಸಾಲ, ಟ್ರಾಕ್ಟರ್/ಟಿಲ್ಲರ್ ಖರೀದಿ ಸಾಲ, ಗೋದಾಮು/ಕಣ ನಿರ್ಮಾಣ ಸಾಲ, ಕೆರೆ ನಿರ್ಮಾಣ ಸಾಲ, ಸೋಲಾರ್ ಉಪಕರಣಗಳ ಅಳವಡಿಕೆಗೆ, ಹೆಚ್‌ಡಿಪಿ ಪೈಪ್ ಲೈನ್ ಅಳವಡಿಕೆಗೆ, ಬೋರ್‌ವೆಲ್ ಕೊರೆಯಲು, ಹೈನುಗಾರಿಕೆ/ಮೀನುಗಾರಿಕೆ ಮತ್ತು ಹಂದಿ/ಕುರಿ/ಕೋಳಿ ಸಾಗಾಣಿಕೆಗೆ ಪ್ರಾಜೆಕ್ಟ್ ಆಧಾರಿತ ಸಾಲ ನೀಡಲಾಗುತ್ತಿದೆ. |

...2

| | | |
|---|---|---|
| ಇ) | ಪ್ರಸಕ್ತ ಆರ್ಥಿಕ ವರ್ಷದಲ್ಲಿ ಇದುವರೆಗೂ ಎಷ್ಟು ರೈತರಿಗೆ ಸಾಲದ ಹಣವನ್ನು ವಿತರಣೆ ಮಾಡಲಾಗಿದೆ; | 2021-22ನೇ ಆರ್ಥಿಕ ವರ್ಷದಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು, ಕೊಡಗು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ಹಾಗೂ ಪಿಕಾರ್ಡ್ ಬ್ಯಾಂಕುಗಳ ಮುಖಾಂತರ ದಿನಾಂಕ:28-02-2022 ರ ಅಂತ್ಯಕ್ಕೆ ಇದ್ದಂತೆ ಒಟ್ಟು 38,006 ರೈತರಿಗೆ ರೂ. 64,343.70 ಲಕ್ಷಗಳ ಸಾಲವನ್ನು ವಿತರಿಸಲಾಗಿರುತ್ತದೆ.<br>ಸಾಲ ವಿತರಿಸಿದ ವಿವರ ಈ ಕೆಳಕಂಡಂತಿದೆ. |

(ರೂ. ಲಕ್ಷಗಳಲ್ಲಿ)

| ಕ್ರ ಸಂ. | ಸಾಲದ ವಿವರ | ರೈತರ ಸಂಖ್ಯೆ | ವಿತರಿಸಿರುವ ಸಾಲದ ಮೊತ್ತ |
|---|---|---|---|
| 1 | ಅಲ್ಪಾವಧಿ ಬೆಳೆ ಸಾಲ | 36,012 | 59,493.79 |
| 2 | ಮಧ್ಯಮಾವಧಿ ಕೃಷಿ/ಕೃಷಿ ಸಂಬಂಧಿತ ಸಾಲ | 908 | 3,425.78 |
| 3 | ಹೈನುಗಾರಿಕೆ ಸಾಲ | 168 | 25.92 |
| 4 | ಮೀನುಗಾರಿಕೆ ಸಾಲ | 6 | 9.00 |
| 5 | ದೀರ್ಘಾವಧಿ ಕೃಷಿ/ಕೃಷಿ ಸಂಬಂಧಿತ ಸಾಲ | 912 | 1389.21 |
| | **ಒಟ್ಟು** | **38,006** | **64,343.70** |

| | | |
|---|---|---|
| ಈ) | ಸಾಲ ಸೌಲಭ್ಯ ಕೋರಿರುವ ಎಲ್ಲಾ ಅರ್ಹ ರೈತರಿಗೆ ಬೆಳೆ ಸಾಲದ ಸೌಲಭ್ಯವನ್ನು ಕಲ್ಪಿಸಲಾಗಿದೆಯೇ? (ವಿವರ ನೀಡುವುದು) | ಸಾಲ ಸೌಲಭ್ಯ ಕೋರಿರುವ ಎಲ್ಲಾ ಅರ್ಹ ರೈತರಿಗೆ ಬೆಳೆ ಸಾಲದ ಸೌಲಭ್ಯವನ್ನು ಕಲ್ಪಿಸಲಾಗಿರುತ್ತದೆ.<br>ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಹಾಗೂ ಕೊಡಗು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ಮುಖಾಂತರ ದಿನಾಂಕ:28-02-2022 ರ ಅಂತ್ಯಕ್ಕೆ ಇದ್ದಂತೆ 36,012 ರೈತರಿಗೆ ರೂ. 59,493.79 ಲಕ್ಷಗಳ ಅಲ್ಪಾವಧಿ ಬೆಳೆ ಸಾಲವನ್ನು ವಿತರಿಸಲಾಗಿರುತ್ತದೆ |

**ಸಂಖ್ಯೆ : ಸಿಒ 84 ಸಿಎಲ್‌ಎಸ್ 2022**

(ಎಸ್. ಟಿ. ಸೋಮಶೇಖರ್)
ಸಹಕಾರ ಸಚಿವರು